## ರಾಮಕೃಷ್ಣ ಮಿಷನ್‌ಗೆ ರಾಷ್ಟ್ರೀಯ ಕೋಮುಸೌಹಾರ್ದತಾ ಪ್ರಶಸ್ತಿ

ರಾಷ್ಟ್ರಾದ್ಯಂತ ಶಾಖೆಗಳನ್ನು ಹೊಂದಿರುವ ರಾಮಕೃಷ್ಣ ಮಿಷನ್‌ಗೆ ೨೦೦೫ನೇ ಸಾಲಿನ ರಾಷ್ಟ್ರೀಯ ಕೋಮುಸೌಹಾರ್ದತಾ ಪ್ರಶಸ್ತಿಯನ್ನು ನೀಡಲಾಗಿದೆ. ಭಾರತ ಸರ್ಕಾರದ ಗೃಹಮಂತ್ರಾಲಯದ ವತಿಯಿಂದ ೧೯೯೬ರಲ್ಲಿ ಅಸ್ತಿತ್ವಕ್ಕೆ ಬಂದ "ರಾಷ್ಟ್ರೀಯ ಕೋಮುಸೌಹಾರ್ದತಾ ಪ್ರತಿಷ್ಠಾನ" ಎಂಬ ಸರ್ವಸ್ವಾಮ್ಯತೆ ಹೊಂದಿರುವ ಸಂಸ್ಥೆಯಿಂದ ಮತೀಯ ಸೌಹಾರ್ದತೆಯನ್ನೂ ರಾಷ್ಟ್ರೀಯ ಭಾವೈಕ್ಯತೆಯನ್ನೂ ಪ್ರೋತ್ಸಾಹಿಸಲು ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ. ಮತೀಯ ಸೌಹಾರ್ದತೆಗಾಗಿ ಬಹಳ ದೀರ್ಘಕಾಲದಿಂದ ನಿರಂತರ ಶ್ರಮಿಸುತ್ತಿರುವ ಸಂಸ್ಥೆಗಳನ್ನು ಹಾಗೂ ವ್ಯಕ್ತಿಗಳನ್ನು ಗುರುತಿಸಿ ಅವರ ಪ್ರಯತ್ನಗಳನ್ನು ಪ್ರಶಂಸಿಸಿ, ಪುರಸ್ಕರಿಸುವ ಸಲುವಾಗಿ ಕೇಂದ್ರ ಸರ್ಕಾರವು ಈ ಪ್ರಶಸ್ತಿಗಳನ್ನು ಪ್ರಾಯೋಜಿಸಿದೆ. ಸಂಸ್ಥೆಗಳ ವಿಭಾಗದಲ್ಲಿ ಈ ಬಾರಿ ರಾಮಕೃಷ್ಣ ಮಿಷನ್‌ಗೂ ಹಾಗೂ ವ್ಯಕ್ತಿಗಳ ವಿಭಾಗದಲ್ಲಿ, ಅನೇಕ ಸಮಾಜ ಸೇವಾ ಕಾರ್ಯಗಳಲ್ಲಿ ತಮ್ಮನ್ನು ನಿರಂತರ ತೊಡಗಿಸಿಕೊಂಡಿರುವ ಗೌಹಾಟಿಯ ನಿವಾಸಿಯಾದ ತೊಂಬತ್ತರ ವೃದ್ಧೆ ಶ್ರೀಮತಿ ಹೇಮಾ ಭರಾಲಿ ಅವರಿಗೂ ಈ ಪ್ರಶಸ್ತಿ ಲಭಿಸಿದೆ. ಈ ಪುರಸ್ಕಾರವು ಪ್ರಶಂಸನಾ ಪತ್ರದೊಂದಿಗೆ ಸಂಸ್ಥೆಗಳಿಗೆ ಐದು ಲಕ್ಷ ರೂಗಳನ್ನು ಹಾಗೂ ವ್ಯಕ್ತಿಗಳಿಗೆ ಎರಡು ಲಕ್ಷ ರೂಗಳನ್ನು ನೀಡುತ್ತದೆ.

## ರಾಮಕೃಷ್ಣ ಮಿಷನ್‌ಗೆ ಅರವತ್ತು ಲಕ್ಷ ರೂ. ದೇಣಿಗೆ

ರಾಮಕೃಷ್ಣ ಮಿಷನ್ನಿನ ಅಂಧ ಬಾಲಕರ ಅಕಾಡೆಮಿಗೆ, ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ ಲಿ., (ONGC) ಅಂಧ ಬಾಲಕರಿಗಾಗಿ ಗಣಕೀಕೃತ ಬ್ರೈಲ್ ಮುದ್ರಣ ಯಂತ್ರವನ್ನು ಆಮದು ಮಾಡಿಕೊಳ್ಳಲು—ಅತ್ಯಂತ ಬೃಹತ್ ಮೊತ್ತದ ಏಕೈಕ ದೇಣಿಗೆ—ಅರವತ್ತು ಲಕ್ಷ ರೂಗಳನ್ನು ನೀಡಿದೆ. ಅಂಧಬಾಲಕರ ಅಕಾಡೆಮಿಯನ್ನು ಹೊಂದಿರುವ ಪಶ್ಚಿಮ ಬಂಗಾಳದ ನರೇಂದ್ರಪುರದ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ಅಸಕ್ತಾನಂದರು ನಾರ್ವೆಯಿಂದ ಯಂತ್ರವನ್ನು ಆಮದು ಮಾಡಿಕೊಳ್ಳಲು ಈ ಮೊತ್ತವನ್ನು ಉಪಯೋಗಿಸಲಾಗುತ್ತದೆ ಎಂದು ತಿಳಿಸಿದರು. ಪ್ರಾಥಮಿಕ ಹಂತದಿಂದ ಪದವಿಯವರೆಗೆ ಅಂಧ ವಿದ್ಯಾರ್ಥಿಗಳಿಗೆ—ಇಂಗ್ಲಿಷ್, ಬಂಗಾಳಿ, ಒರಿಯಾ, ಅಸ್ಸಾಮಿ, ಸಂಸ್ಕೃತ ಹಾಗೂ ಮಣಿಪುರಿ—ಈ ಆರು ಭಾಷೆಗಳಲ್ಲಿ ಬ್ರೈಲ್ ಪುಸ್ತಕಗಳನ್ನು ಈ ಯಂತ್ರದಿಂದ ಮುದ್ರಿಸಬಹುದಾಗಿದೆ. ಈ ಶಾಲೆಯಲ್ಲಿ ೧೮೦ ವಿದ್ಯಾರ್ಥಿಗಳಿದ್ದು, ಅವರೆಲ್ಲರಿಗೂ ವೃತ್ತಿಶಿಕ್ಷಣವನ್ನೂ ನೀಡಲಾಗುತ್ತಿದೆ ಎಂದು ಅಂಧ ವಿದ್ಯಾರ್ಥಿಗಳ ಶಾಲೆಯ ಪ್ರಾಂಶುಪಾಲರಾದ ಎಸ್. ಪಾಟ್ನಾಯಕ್ ಅವರು ತಿಳಿಸಿದರು. ಒ.ಎನ್.ಜಿ.ಸಿಯ ಮಾನವ ಸಂಪನ್ಮೂಲದ ನಿರ್ದೇಶಕರಾದ ಶ್ರೀ ಎ.ಕೆ. ಬಲ್ಯಾನ್ ಅವರು ಸಮಾಜದ ಸೌಲಭ್ಯವಂಚಿತ ವರ್ಗದವರಿಗೆ ನೆರವನ್ನು ನೀಡುವ ನಿಟ್ಟಿನಲ್ಲಿ ತಮ್ಮ ಸಂಸ್ಥೆಯು ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲಿದೆ ಎಂದು ತಿಳಿಸಿದರು.

## ಜ್ಞಾನವಾಹಿನಿ ಕಾರ್ಯಕ್ರಮಗಳು

ಮೈಸೂರು ರಾಮಕೃಷ್ಣ ಆಶ್ರಮದ ಜ್ಞಾನವಾಹಿನಿ ಕಾರ್ಯಕ್ರಮವು ೨೦೦೫ರ ನವೆಂಬರ್ ೦೬ನೇ ತಾರೀಖಿನಿಂದ ಡಿಸೆಂಬರ್ ತಿಂಗಳ ೬ನೇಯ ತಾರೀಖಿನವರೆಗೆ ಒಂದು ತಿಂಗಳ ಕಾಲ ಬೆಳಗಾವಿ ಜಿಲ್ಲೆಯ ಸುಮಾರು ೨೬ ಹಳ್ಳಿಗಳಲ್ಲಿ ಬೆಳಗಾವಿ ರಾಮಕೃಷ್ಣ ಮಿಷನ್ನಿನ ಸಹಯೋಗದೊಂದಿಗೆ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ ನಡೆಸಲಾದ ಶೋಭಾಯಾತ್ರೆಗಳಲ್ಲಿ ೧೫,೦೦೦ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ೪೦ ಶಾಲಾ ಕಾಲೇಜುಗಳಲ್ಲಿ ನಡೆಸಲಾದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ೧೬,೫೦೦ ಬಾಲಕ ಬಾಲಕಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಂಜೆ ನಡೆದ ಗ್ರಾಮ ಮಟ್ಟದ ಸತ್ಸಂಗ ಹಾಗೂ ದಿವ್ಯತ್ರಯರ ಜೀವನ ಸಂದೇಶಗಳ ಚಲನಚಿತ್ರ ಪ್ರದರ್ಶನದಲ್ಲಿ ೬,೦೦೦ಕ್ಕೂ ಹೆಚ್ಚು ಗ್ರಾಮಸ್ಥರು ಭಾಗವಹಿಸಿದ್ದರು.

# ಸುದ್ದಿಸಂಚಯ

ಇದೇ ರೀತಿಯಾಗಿ ಜ್ಞಾನವಾಹಿನಿ ಕಾರ್ಯಕ್ರಮವು ೧೬ನೇ ಜನವರಿ ೨೦೦೬ ರಿಂದ ೨೮ನೇ ಜನವರಿ ೨೦೦೬ರವರೆಗೆ ೧೩ ದಿನಗಳ ಕಾಲ ಬಿಜಾಪುರ ಜಿಲ್ಲೆಯ ೧೮ ಹಳ್ಳಿಗಳಲ್ಲಿ ಧೂಳಖೇಡದ ವಿವೇಕಾನಂದ ಯುವಶಕ್ತಿ ಕೇಂದ್ರದ ಸಹಯೋಗದೊಂದಿಗೆ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ ನಡೆಸಲಾದ ಶೋಭಾಯಾತ್ರೆಗಳಲ್ಲಿ ೫,೦೦೦ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ೧೫ ಶಾಲಾ ಕಾಲೇಜುಗಳಲ್ಲಿ ನಡೆಸಲಾದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ೫,೫೦೦ ಬಾಲಕ ಬಾಲಕಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಂಜೆ ನಡೆದ ಗ್ರಾಮ ಮಟ್ಟದ ಸತ್ಸಂಗ ಹಾಗೂ ದಿವ್ಯತ್ರಯರ ಜೀವನಸಂದೇಶಗಳ ಚಲನ ಚಿತ್ರ ಪ್ರದರ್ಶನಗಳಲ್ಲಿ ೫,೦೦೦ಕ್ಕೂ ಹೆಚ್ಚು ಗ್ರಾಮಸ್ಥರು ಭಾಗವಹಿಸಿದ್ದರು.

☛ ೨೫.೧೨.೨೦೦೫ರಂದು ಶ್ರೀಮಾತೆ ಶಾರದಾದೇವಿಯವರ ಜನ್ಮದಿನೋತ್ಸವದ ಅಂಗವಾಗಿ ಮೈಸೂರಿನ ರಾಮಕೃಷ್ಣ ಆಶ್ರಮ ಹಾಗೂ ಅದರ ಅಂಗಸಂಸ್ಥೆಗಳ ತೋಟ ಹಾಗೂ ಅಡುಗೆ ಮನೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಹಾಗೂ ಅವರ ಕುಟುಂಬದವರಿಗೆ ಉಚಿತ ಆಧ್ಯಾತ್ಮಿಕ ಶಿಬಿರವನ್ನು ಏರ್ಪಡಿಸಲಾಗಿತ್ತು. ಅತ್ಯಂತ ಸಂತಸದಿಂದ ಅವರೆಲ್ಲ ಭಜನೆ, ಧ್ಯಾನ ಹಾಗೂ ಉಪನ್ಯಾಸಗಳಲ್ಲಿ ಪಾಲ್ಗೊಂಡರು.

☛ ಭಾರತದ ರಾಷ್ಟ್ರಪತಿಗಳಾದ ಡಾ.ಅಬ್ದುಲ್ ಕಲಾಂ ಅವರು ಜನವರಿ ೧೨ರಂದು ಪೋರ್ ಬಂದರಿನ ರಾಮಕೃಷ್ಣ ಮಿಷನ್ ಏರ್ಪಡಿಸಿದ್ದ ರಾಷ್ಟ್ರೀಯ ಯುವದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ, ಅವರು "ಸ್ವಾಮಿ ವಿವೇಕಾನಂದರ ಸಂದೇಶಗಳು ಆಧುನಿಕ ಯುವಕರಿಗೆ ತುಂಬ ಆವಶ್ಯಕವಾಗಿವೆ; ಅವು ಅವರನ್ನು ಸ್ಫೂರ್ತಿಭರಿತರನ್ನಾಗಿ ಮಾಡುತ್ತವೆ" ಎಂದು ಹೇಳಿದರು. ಸುಮಾರು ೫೦೦೦ ಯುವಕರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಯುವಕರ




ಪು..ಸ್ತಕವೊಂದನ್ನು ಬಿಡುಗಡೆ ಮಾಡುತ್ತಿರುವ ರಾಷ್ಟ್ರಪತಿಗಳು. ಅವರ ಪಕ್ಕದಲ್ಲಿರುವವರು ಸ್ವಾಮಿ ನಿಖಿಲೇಶ್ವರಾನಂದಜಿ ಅವರು.

೨೬ ಪ್ರಶ್ನೆಗಳಿಗೆ ಉತ್ತರಿಸಿದ ರಾಷ್ಟ್ರಪತಿಗಳು, ಇದೇ ಸಂದರ್ಭದಲ್ಲಿ ವಿವೇಕಾನಂದ ಮೌಲ್ಯಾಧಾರಿತ ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆ (Vivekananda Institute of Value Education and Culture) ಯನ್ನೂ ಕೂಡ ಉದ್ಘಾಟಿಸಿದರು.

☛ ಜನವರಿ ೧೨ರಂದು ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಯುವದಿನಾಚರಣೆಯ ಪ್ರಯುಕ್ತ ಸ್ವಾಮಿ ವಿವೇಕಾನಂದ ಪೀಠ, ಮಾನಸಗಂಗೋತ್ರಿ ಹಾಗೂ ಮೈಸೂರು ರಾಮಕೃಷ್ಣ ಆಶ್ರಮದ ಸಂಯುಕ್ತ ಆಶ್ರಯದಲ್ಲಿ ಆಶ್ರಮದ ಸಭಾಂಗಣದಲ್ಲಿ ಯುವಜನ ಶಿಬಿರವನ್ನು ಏರ್ಪಡಿಸಲಾಗಿತ್ತು. ಸುಮಾರು ೧೫೦ ಜನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಕ್ರಿಯವಾಗಿ ಭಾಗವಹಿಸಿದರು.

☛ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಆರ್ಥಿಕವಾಗಿ ಹಾಗೂ ವಿದ್ಯಾಭ್ಯಾಸದಲ್ಲಿ ಹಿಂದುಳಿದ ೯ ಮತ್ತು ೧೦ನೆಯ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ವಿಶೇಷ ನೆರವಿನ ಉಚಿತ ಶಿಕ್ಷಣ ಕಾರ್ಯಕ್ರಮ (ವಿವೇಕ ಶಿಕ್ಷಣ)ವನ್ನು ನಡೆಸುತ್ತಿದ್ದು, ೨೬.೦೧.೦೬ ರಂದು ಅದರ ಐದನೇ ವಾರ್ಷಿಕೋತ್ಸವವನ್ನು ಆಚರಿಸಿತು.

☛ ಬೆಳಗಾವಿಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದ ಮಂದಿರದ ಉದ್ಘಾಟನೆಯ ಸ್ಮರಣಾರ್ಥವಾಗಿ ಹಾಗೂ ಎರಡನೆಯ ವಾರ್ಷಿಕೋತ್ಸವದ ಅಂಗವಾಗಿ ೨೭.೦೧.೦೬ ರಿಂದ ೨೯.೦೧.೦೬ರವರೆಗೆ ಆಶ್ರಮದ ಆವರಣದಲ್ಲಿ ಸಾಂಸ್ಕೃತಿಕ ಹಾಗೂ ಸೇವಾ ಕಾರ್ಯಕ್ರಮಗಳು ಆಚರಿಸಲ್ಪಟ್ಟವು. ೩೫೦ ಯುವತಿಯರು ಭಾಗವಹಿಸಿದ ಯುವ ಶಿಬಿರದೊಂದಿಗೆ ೨೭ರಂದು ಕಾರ್ಯಕ್ರಮ ಪ್ರಾರಂಭವಾಯಿತು. ಸಂಜೆ ಸ್ವಾಮಿ ವಿವೇಕಾನಂದರು ಒಂಬತ್ತು ದಿನ ತಂಗಿದ್ದ ಕೋಣೆಯಲ್ಲಿ ಅವರ

ಅಂಗವಿಕಲನೊಬ್ಬನಿಗೆ ಗಾಲಿಕುರ್ಚಿಯನ್ನು ಸ್ವಾಮಿ ಸುಹಿತಾನಂದಜಿ ನೀಡುತ್ತಿದ್ದಾರೆ. ಪಕ್ಕದಲ್ಲಿ, ಸ್ವಾಮಿ ರಾಘವೇಶಾನಂದಜಿ ಹಾಗೂ ಹಿಂಬದಿಯಲ್ಲಿ ಕು.ಡೊರೋಥಿ



ಭವ್ಯ ಮೂರ್ತಿಯನ್ನು ಅನಾವರಣಗೊಳಿಸಲಾಯಿತು. ೨೮ರಂದು ಆಯೋಜಿಸಿದ್ದ ಯುವಕರ ಶಿಬಿರದಲ್ಲಿ ೨೫೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ೨೯ರಂದು ವಿಶೇಷ ಭಕ್ತ ಸಮ್ಮೇಳನವನ್ನು ನಡೆಸಲಾಯಿತು. ೭೫೦ ಜನ ಭಕ್ತರು ಭಾಗವಹಿಸಿದರು. ಹಿರಿಯ ಸಂನ್ಯಾಸಿಗಳಿಂದ, ಗಣ್ಯರಿಂದ ವ್ಯಕ್ತಿತ್ವ ನಿರ್ಮಾಣ ಹಾಗೂ ದಿವ್ಯತ್ರಯರ ಜೀವನವನ್ನು ಕುರಿತಾದ ಪ್ರವಚನಗಳನ್ನು ಏರ್ಪಡಿಸಲಾಗಿತ್ತು. ಪ್ರಶ್ನೋತ್ತರಕ್ಕೂ ಅವಕಾಶವಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದಿರುವ ೧೫೦ ಅಂಗವಿಕಲರನ್ನು ಗುರುತಿಸಿ ಅವರಿಗೆ ಗಾಲಿಕುರ್ಚಿಗಳನ್ನು ವಿತರಿಸಲಾಯಿತು. ಉತ್ತಮ ಸಂಗೀತ ಹಾಗೂ ಭಜನೆಯ ಕಾರ್ಯಕ್ರಮಗಳು ಜನರನ್ನು ಆಕರ್ಷಿಸಿದವು. ಬಸವೇಶ್ವರ ಹಾಗೂ ಅಕ್ಕ ಮಹಾದೇವಿಯವರ ಜೀವನ ಸಂದೇಶಗಳನ್ನು ನಿರೂಪಿಸುವ ತೈಲಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಲಾಯಿತು. ✪


**Experience the joy of online banking wherever you are.**



Presenting

MoneyClick™ Internet Banking

*MoneyClick*™, Karnataka Bank's Internet Banking service enables you to access your corporate, retail or kids' accounts anytime, making it the perfect tool to do your banking from home, office or when traveling, with the assurance of security.

**Services accessible:** • Inquiries and Requests • Funds Transfer • Corporate Services • Trade Finance • Utility Bill Payment • SMS Banking / Alert

To harness the power of online banking log on to **www.karnatakabank.com** or drop into your nearest Karnataka Bank branch.

24-Hour Help Desk Toll Free No. **16 00 425 1444**.

Also avail our other technology driven products:
• K-Flexi Deposit • K-Power • Multi Branch Banking • Multi City Cheque
• Moneyplant ATM • Moneyplant International VISA Debit Card.

**Assuring you of Karnataka Bank's desire to be of service at all times.**

* Conditions Apply

Karnataka Bank Ltd.
Your Family Bank. Across India.

**Regd. & Head Office: Mangalore - 575 002**



*Managing Editor: Swami Nityasthananda* *Editor: Swami Atmajnanananda*
*Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.*